# ಎನ್‌ಆರ್ ಸಮೂಹದ ಜೋ ಜೋ ಕ್ರಿಕೆಟ್ ಕ್ಲಬ್‌ನ ಐತಿಹಾಸಿಕ ಸಾಧನೆ

# ಕೆಎಸ್‌ಸಿಎ ಪಂದ್ಯಾವಳಿಯ ಮೂರು ಮಾದರಿಗಳಲ್ಲಿ ವಿಜಯಶಾಲಿ

---

**ಮೈಸೂರು, ಮಾರ್ಚ್ 26, 2019:** ಮೈಸೂರು ಮೂಲಕ ಎನ್‌ಆರ್ ಸಮೂಹದ ಮಾಲೀಕತ್ವದ ಜೋ ಜೋ ಕ್ರಿಕೆಟ್ ಕ್ಲಬ್, ಮೈಸೂರು ವಲಯಕ್ಕಾಗಿ ಕೆಎಸ್‌ಸಿಎ ವತಿಯಿಂದ ಆಯೋಜಿಸಲಾಗಿದ್ದ ಎಲ್ಲಾ ಮೂರು ಮಾದರಿಯ ಕ್ರಿಕೆಟ್ ಪಂದ್ಯಾವಳಿಗಳನ್ನು ಗೆಲ್ಲುವ ಮೂಲಕ ಮಹತ್ವದ ಮೈಲಿಗಲ್ಲು ಸಾಧಿಸಿದೆ. ಶ್ರೀ ಶ್ರೀ ಗೋಪಾಲಸ್ವಾಮಿ ಸ್ಮಾರಕ ಪಂದ್ಯಾವಳಿ, ಕೆಎಸ್‌ಸಿಎ ಟಿ?20 ಪಂದ್ಯಾವಳಿ ಮತ್ತು ಐ ಡಿವಿಷನ್ ಝೋನಲ್ ಲೀಗ್ ಪಂದ್ಯಾವಳಿಯಲ್ಲಿ ಸೋಮಶೇಖರ್ ಅವರ ಪರಿಣಾಮಕಾರಿ ನಾಯಕತ್ವದಲ್ಲಿ ಯುವ ಉತ್ಸಾಹಿ ತಂಡ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿ ವಿಜಯಶಾಲಿಯಾಗಿ ಹೊರಹೊಮ್ಮಿದೆ.

ಈ ಐತಿಹಾಸಿಕ ವಿಜಯದೊಂದಿಗೆ, ಜೋ ಜೋ ಕ್ರಿಕೆಟ್ ಕ್ಲಬ್‌ನ ಆಟಗಾರರು ತಮ್ಮ ಸ್ಥಾನವನ್ನು ಬಲಪಡಿಸಿಕೊಂಡರು. ಈ ಪ್ರತಿಭಾವಂತ ತಂಡ, ತಾವು ಹೊಂದಿರುವ ಅಗಾಧ ಸಾಮರ್ಥ್ಯ ಮತ್ತು ಕೌಶಲಗಳನ್ನು ಈ ಮೂರೂ  ಪಂದ್ಯಗಳಲ್ಲಿ ಪ್ರದರ್ಶಿಸುವ ಮೂಲಕ ಕ್ಲಬ್‌ಗೂ ಮನ್ನಣೆಯನ್ನು ತಂದು ಕೊಟ್ಟರು.

**ಈ ವಿಜಯದ ಕುರಿತು ಮಾತನಾಡಿದ ಸೈಕಲ್ ಪ್ಯೂರ್ ಅಗರಬತ್ತೀಸ್‌ನ ವ್ಯವಸ್ಥಾಪಕರು ನಿರ್ದೇಶಕ ಮತ್ತು ಜೋ ಜೋ ಕ್ರಿಕೆಟ್ ಕ್ಲಬ್‌ನ ಮಾಲೀಕರು** ಆದ ಶ್ರೀ ಅರ್ಜುನ್ ರಂಗ, 'ಎನ್‌ಆರ್ ಸಮೂಹದಲ್ಲಿ ನಾವು ಯಾವಾಗಲೂ ಕ್ರೀಡಾ ಪ್ರತಿಭೆಯನ್ನು ಪೋಷಿಸುವುದರಲ್ಲಿ ನಂಬಿಕೆ ಹೊಂದಿದ್ದೇವೆ. ಅದು ಕ್ರಿಕೆಟ್ ಆಗಿರಬಹುದು ಅಥವಾ ಯಾವುದೇ ಇತರ ಕ್ರೀಡೆಯಾಗಿರಬಹುದು. ಈ ಕ್ರಿಕೆಟ್ ಕ್ಲಬ್ ಮೂಲಕ, ನಾವು ಉತ್ತಮ ಕ್ರಿಕೆಟಿಗರನ್ನು ಗುರುತಿಸುವ, ಅವರಿಗೆ ಸೂಕ್ತ ವೇದಿಕೆ ಒದಗಿಸುವ ಮತ್ತು ಅವರ ಪ್ರತಿಭೆಯನ್ನು ಬೆಳಕಿಗೆ ತರುವ ಉದ್ದೇಶ ಹೊಂದಿದ್ದೇವೆ. ಸ್ಥಳೀಯ ಪ್ರತಿಭೆಗಳಿಗೆ ತಮ್ಮ ಕೌಶಲ್ಯಗಳನ್ನು ಪ್ರದರ್ಶಿಸಿ ಉತ್ತಮ ಕ್ರಿಕೆಟಿಗರಾಗಿ ಬೆಳೆಯಲು ಇದೊಂದು ಉತ್ತಮ ಅವಕಾಶ' ಎಂದು ಅಭಿಪ್ರಾಯಪಟ್ಟರು.

ಪಂದ್ಯಾವಳಿಯು ವೆಂಕಟೇಶ್ ಎಂ. ಮತ್ತು ಉತ್ತಮ್ ಐಯಪ್ಪ, ಶಂತರಾಜ್ ಸೇರಿದಂತೆ ಕ್ಲಬ್‌ನ ಅತ್ಯುತ್ತಮ ಆಲ್-ರೌಂಡರ್ ಆಟಗಾರರನ್ನು ಮುನ್ನೆಲೆಗೆ ತಂದಿದೆ. ಆಲ್‌ರೌಂಡರ್ ವೆಂಕಟೇಶ್ ಅವರು ಎಂಆರ್‌ಎಫ್ ಪೇಸ್ ಫೌಂಡೇಶನ್‌ಗೂ ಸಹ ಆಯ್ಕೆಯಾಗಿದ್ದಾರೆ. ಇದು ಟೆಸ್ಟ್ ಕ್ರಿಕೆಟ್‌ನಲ್ಲಿ ಭಾಗವಹಿಸುವ ಎಲ್ಲಾ ದೇಶಗಳ ವೇಗದ ಬೌಲರ್‌ಗಳಿಗೆ ತರಬೇತಿ ನೀಡುವ ಬೇಡಿಕೆಯಲ್ಲಿರುವ ಸಂಸ್ಥೆಯಾಗಿದೆ. ಬ್ರೆಟ್ ಲೀ, ಶೋಯೆಬ್ ಅಖ್ತರ್, ಶೇನ್ ಬಾಂಡ್ ಮೊದಲಾದ ಹಲವಾರು ಅಂತರರಾಷ್ಟ್ರೀಯ ವೇಗದ ಬೌಲರ್‌ಗಳು ಈ ಪೇಸ್ ಫೌಂಡೇಶನ್‌ನಲ್ಲಿ ತರಬೇತಿ ಪಡೆದವರೇ ಆಗಿದ್ದಾರೆ.

## ಎನ್.ಆರ್. ಸಮೂಹದ ಬಗ್ಗೆ

ಮೈಸೂರು ಮೂಲದ ಎನ್‌ಆರ್ ಸಮೂಹವನ್ನು 1948ರಲ್ಲಿ ಶ್ರೀ ಎನ್. ರಂಗರಾವ್ ಅವರು ಸ್ಥಾಪಿಸಿದರು. ಗೃಹ ಕೈಗಾರಿಕೆಯಾಗಿ ಸ್ಥಾಪನೆಯಾದ ಎನ್‌ಆರ್ ಸಮೂಹವು ಇಂದು ಭಾರತ ಮತ್ತು ವಿದೇಶದಲ್ಲಿ ಸ್ಥಾಪಿತ ಉಪಸ್ಥಿತಿಯನ್ನು ಹೊಂದಿರುವ ಒಂದು ಯಶಸ್ವಿಯಾದ ಸಂಘಟಿತ ಉದ್ಯಮ ಸಂಸ್ಥೆಯಾಗಿ ಹೊರಹೊಮ್ಮಿದೆ. ಸಮೂಹ ಇಂದು ವಿವಿಧ ವಹಿವಾಟುಗಳನ್ನು ಹೊಂದಿದೆ. ಇದರಲ್ಲಿ ರಿಪ್ಪಲ್ ಫ್ರಾಗ್ರನ್ಸ್ ಅಡಿಯಲ್ಲಿ– ಸುಗಂಧ ದ್ರವ್ಯಗಳು (ಲಿಯಾ ಬ್ರಾಂಡ್‌ನ ರೂಂ ಫ್ರೆಷ್‌ನರ್ಸ್, ಕಾರ್ ಫ್ರೆಷ್‌ನರ್ಸ್) ಹಾಗೂ ಸುವಾಸನೆಯುಕ್ತ ವೆಲ್‌ನೆಸ್ ಹೋಂ ಉತ್ಪನ್ನಗಳು (ಐಆರ್‌ಐಎಸ್), ಫ್ಲೋರಲ್ ಎಕ್ಸ್‌ಟ್ರಾಕ್ಟ್ಸ್ (ಎನ್‌ಇಎಸ್‌ಎಸ್‌ಒ) ಕೂಡ ಸೇರಿವೆ. ಸಮೂಹವು ತನ್ನ ಸಾಮಾಜಿಕ ಹೊಣೆಗಾರಿಯನ್ನು ಎನ್‌ಆರ್ ಫೌಂಡೇಷನ್ ಮೂಲಕ ನಿಭಾಯಿಸುತ್ತಿದೆ. ಎನ್‌ಆರ್ ಸಮೂಹದ ಬಗ್ಗೆ ಹೆಚ್ಚಿಗೆ ತಿಳಿದುಕೊಳ್ಳಲು ಭೇಟಿ ಕೊಡಿ: http://www.nrgroup.co.in/.